ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು-1, ಬೆಂಗಳೂರು ವಿಭಾಗ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

**ಸುತ್ತೋಲೆ.**

2011-12 ನೇ ಸಾಲಿನ ಬೆಂಗಳೂರು ವಿಭಾಗ ಮಟ್ಟದ ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಕೋರಿಕೆ ವರ್ಗಾವಣೆ ಬಗ್ಗೆ ವೇಳಾ ಪಟ್ಟಿ.

1. ಸಹ ಶಿಕ್ಷಕರ ವೃಂದದಲ್ಲಿ ಭಾಷಾ ಶಿಕ್ಷಕರು, ಪಿಸಿಎಂ, ಸಿಬಿಜಡ್, ಕಲಾ ಶಿಕ್ಷಕರು, ಶಿಕ್ಷಣ ಸಂಯೋಜಕರು, ಟಿಜಿಟಿ ಶಿಕ್ಷಕರು, ಬಿಆರ್‌ಪಿ, ಶಾಸಕರ ಮಾದರಿ ಶಾಲಾ ಪದವೀಧರ ಮುಖ್ಯ ಶಿಕ್ಷಕರು ಒಳಗೊಂಡಿರುತ್ತಾರೆ. ಈ ಎಲ್ಲಾ ಶಿಕ್ಷಕರನ್ನು ಒಟ್ಟುಗೂಡಿಸಿ ಆಧ್ಯತಾ ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಆದ್ದರಿಂದ ಈ ಹಿಂದೆ ಕೌನ್ಸಿಲಿಂಗ್ ವೇಳಾ ಪಟ್ಟಿಯನ್ನು ಭಾಷಾ ಶಿಕ್ಷಕರಿಗೆ, ವಿಷಯ ಶಿಕ್ಷಕರಿಗೆ, ವಿಶೇಷ ಶಿಕ್ಷಕರಿಗೆ ಹಾಗೂ ದೈಹಿಕ ಶಿಕ್ಷಕರಿಗೆ ಪ್ರತ್ಯೇಕವಾಗಿ ದಿನಾಂಕವನ್ನು ನಿಗಧಿಪಡಿಸಲಾಗಿತ್ತು. ಅದನ್ನು ಬದಲಾಯಿಸಿ ಎಲ್ಲಾ ಶಿಕ್ಷಕರನ್ನು ಒಟ್ಟುಗೂಡಿಸಿ ಆಧ್ಯತಾಪಟ್ಟಿಯಂತೆ ಈ ಕೆಳಗೆ ನಮೂದಿಸಿದಂತೆ ಕೌನ್ಸಿಲಿಂಗ್ ನಡೆಸಲಾಗುವುದು

# ಕೌನ್ಸಲಿಂಗ್ ವೇಳಾ ಪಟ್ಟಿ

## ಕೌನ್ಸಲಿಂಗ್ ನಡೆಯುವ ಸ್ಥಳ: ಶಿಕ್ಷಕರ ಸಧನ, ಕಾವೇರಿ ಭವನ ಎದುರು, ಕೆ.ಜಿ.ರಸ್ತೆ, ಬೆಂಗಳೂರು-02

**ದಿನಾಂಕ: 05-06-2011** ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಆಧ್ಯತಾ ಪಟ್ಟಿ ಕ್ರಮ ಸಂಖ್ಯೆ: 01 ರಿಂದ 400
ಒಟ್ಟು ಶಿಕ್ಷಕರು-400

**ದಿನಾಂಕ: 06-06-2011** ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಆಧ್ಯತಾ ಪಟ್ಟಿ ಕ್ರಮ ಸಂಖ್ಯೆ: 401 ರಿಂದ 1000.
ಒಟ್ಟು ಶಿಕ್ಷಕರು-600

**ದಿನಾಂಕ: 07-06-2011** ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಆಧ್ಯತಾ ಪಟ್ಟಿ ಕ್ರಮ ಸಂಖ್ಯೆ: 1001 ರಿಂದ 1600
ಒಟ್ಟು ಶಿಕ್ಷಕರು-600

**ದಿನಾಂಕ: 08-06-2011** ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಆಧ್ಯತಾ ಪಟ್ಟಿ ಕ್ರಮ ಸಂಖ್ಯೆ: 1601 ರಿಂದ 1882
ಒಟ್ಟು ಶಿಕ್ಷಕರು-282

**ದಿನಾಂಕ: 07-06-2011** ವಿಶೇಷ ಶಿಕ್ಷಕರ ತಾತ್ಕಾಲಿಕ ಅಂತಿಮ ಆಧ್ಯತಾ ಪಟ್ಟಿ ಕ್ರಮ ಸಂಖ್ಯೆ: 01 ರಿಂದ 101
ಒಟ್ಟು ಶಿಕ್ಷಕರು-101

**ದಿನಾಂಕ: 08-06-2011** ದೈಹಿಕ ಶಿಕ್ಷಣ ಶಿಕ್ಷಕರ ತಾತ್ಕಾಲಿಕ ಅಂತಿಮ ಆಧ್ಯತಾ ಪಟ್ಟಿ ಕ್ರಮ ಸಂಖ್ಯೆ: 01 ರಿಂದ 180
ಒಟ್ಟು ಶಿಕ್ಷಕರು-180

1/6

# ವಿಶೇಷ ಸೂಚನೆಗಳು

1. ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ, ಶಿಕ್ಷಕರು ವರ್ಗಾವಣಾ ಅರ್ಜಿಸಲ್ಲಿಸುವಾಗ ಕೋರಿರುವ ಆದ್ಯತೆಯನ್ನು ಪರಿಗಣಿಸಿ ಆದ್ಯತಾ ಪಟ್ಟಿ ಸಿದ್ಧಪಡಿಸಲಾಗಿದೆ. ಶಿಕ್ಷಕರು ಕೌನ್ಸಲಿಂಗ್‌ಗೆ ಹಾಜರಾಗುವಾಗ ಆದ್ಯತೆಯನ್ನು ಪುಷ್ಠೀಕರಿಸುವ ದಾಖಲೆಗಳನ್ನು ತಪ್ಪದೇ ವರ್ಗಾವಣಾ ಪ್ರಾಧಿಕಾರಕ್ಕೆ ಹಾಜರುಪಡಿಸುವುದು. ತಪ್ಪಿದಲ್ಲಿ ಶಿಕ್ಷಕರು ವರ್ಗಾವಣಾ ಕೌನ್ಸಲಿಂಗ್ ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅನರ್ಹರಾಗುತ್ತಾರೆ. ಬೇರೆ ಯಾವುದೇ ಆದ್ಯತಾ ಗುಂಪಿನಲ್ಲಿ ಹೆಸರುಗಳನ್ನು ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲ.
2. ಕರ್ನಾಟಕ ರಾಜ್ಯ ಸಿವಿಲ್ ಸೇವಾ [ಶಿಕ್ಷಕರ ವರ್ಗಾವಣಾ ನಿಯಂತ್ರಣ] ನಿಯಮಗಳು 2007 ರ 15ನೇ ನಿಯಮದಡಿ ವರ್ಗಾವಣೆಗೊಂಡು ಬಿಡುಗಡೆಯಾದ ಶಿಕ್ಷಕರು ಮಾತ್ರ ವರ್ಗಾವಣೆಗೆ ಅರ್ಜಿ ಸಲ್ಲಿಸಬಯಸಿದಲ್ಲಿ ಅವರು ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ಸ್ಥಳದಲ್ಲಿ ಕನಿಷ್ಠ 3 ವರ್ಷ ಪೂರೈಸಿರತಕ್ಕದ್ದು.
3. ಘಟಕದ ಹೊರಗೆ ವರ್ಗಾವಣೆ ಬಯಸಿದ ಸಹ ಶಿಕ್ಷಕರು [ಇತರೆ ಮಹಿಳೆ ಮತ್ತು ಇತರೆ ಪುರುಷ ಶಿಕ್ಷಕರು] ದಿನಾಂಕ 04–05–2005 ಕ್ಕೆ 5 ವರ್ಷಗಳ ಸೇವೆಯನ್ನು ಪೂರ್ಣಗೊಳಿಸದೇ ಇರುವವರು ವರ್ಗಾವಣೆ ಹೊಂದಲು ಅರ್ಹರಾಗುವುದಿಲ್ಲ. ಅಂತಹ ಶಿಕ್ಷಕರು ಒಂದು ವೇಳೆ ತಾತ್ಕಾಲಿಕ ಅಂತಿಮ ಆದ್ಯತಾ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಲ್ಲಿ ವರ್ಗಾವಣೆಗೆ ಪರಿಗಣಿಸುವುದಿಲ್ಲ.

ಸಹನಿರ್ದೇಶಕರು–1 ಹಾಗೂ ವರ್ಗಾವಣಾ ಪ್ರಾಧಿಕಾರಿಗಳು
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು ವಿಭಾಗ, ಬೆಂಗಳೂರು.